ಆ) ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯಿಂದ ಗಾಯಗೊಂಡವರ ಪ್ರಕರಣಗಳ ವಿವರ ಈ ಕೆಳಗಿನಂತಿದೆ

ವರ್ಷ	ಮಾನವ ಪ್ರಾಣ ಹಾನಿ ಪ್ರಕರಣ ಸಂಖ್ಯೆ	ವಿತರಿಸಿರುವ ಪರಿಹಾರ ಧನ
2005–06	7	32,000/–
2006–07	1	2,000/–
ಒಟ್ಟು	8	34,000/–

ಇ) 2005–06 ಮತ್ತು 2006–07ನೇ ಸಂಬಂಧಪಟ್ಟಂತೆ ಪರಿಹಾರ ನೀಡದಿರುವ ಪ್ರಕರಣಗಳು ಇರುವುದಿಲ್ಲ

ಈ) 2005–06ನೇ ಸಾಲಿನಲ್ಲಿ ಎರಡು ಮತ್ತು 2006–07ನೇ ಸಾಲಿನಲ್ಲಿ ಒಂದು, ಒಟ್ಟು ಮೂರು ಕಾಡಾನೆಗಳನ್ನು ಮೇಲಿನ ಪ್ರದೇಶಗಳ ವ್ಯಾಪ್ತಿಯಲ್ಲಿ ಹಿಡಿದಿದ್ದು ಎರಡನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಮೂರ್ಕಲ್ ಆನೆ ವಾಸ್ತವ್ಯಕ್ಕೂ ಹಾಗೂ ಒಂದನ್ನು ಭದ್ರಾ ವನ್ಯಧಾಮಕ್ಕೂ ಸ್ಥಳಾಂತರಿಸಲಾಗಿದೆ

ಉ) ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಸುಮಾರು 20 ರಿಂದ 30 ಕಾಡಾನೆಗಳನ್ನು ಗುರುತಿಸಲಾಗಿದ್ದು, ಅವುಗಳು ಪಕ್ಕದ ಕೊಡಗು ಜಿಲ್ಲೆಯಿಂದ ವಲಸೆ ಬಂದವುಗಳಾಗಿರುತ್ತವೆ

ಊ) ಹಾಸನ ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟುವ ಸಲುವಾಗಿ ಈಗಾಗಲೇ ಎರಡು ತಂಟೆಕೋರ ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲು ಆದೇಶ ನೀಡಿದ್ದು, ಅದರನ್ವಯ ಸಕಲೇಶಪುರ ತಾಲ್ಲೂಕಿನ ಯಸಳೂರು ವಲಯದ ಕೆರೊಡಿ ಎಂಬ ಸ್ಥಳದಲ್ಲಿ ಆನೆ ಕ್ಯಾಂಪ್ ಸ್ಥಾಪಿಸಿ ಸದರಿ ಎರಡು ಗುರುತಿಸಿದ ಕಾಡಾನೆಗಳನ್ನು ಹಿಡಿಯುವ ಸಲುವಾಗಿ ಇಲಾಖಾ ಆನೆಗಳನ್ನು ತರಲಾಗಿದೆ ಮತ್ತು ಕಾಡಾನೆಗಳನ್ನು ಹಿಡಿಯುವ ಕಾರ್ಯಾಚರಣೆ ಪ್ರಗತಿಯಲ್ಲಿರುತ್ತದೆ

ಅಲ್ಲದೆ ಜಿಲ್ಲೆಯಲ್ಲಿ ಹಾವಳಿ ನಡೆಸುತ್ತಿರುವ ಸುಮಾರು 20 ರಿಂದ 30 ಕಾಡಾನೆಗಳನ್ನು ಶಾಶ್ವತವಾಗಿ ಸೆರೆಹಿಡಿದ್ದ ಬೇರೆಡೆಗೆ ಸ್ಥಳಾಂತರಿಸಲು ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಅನುಮತಿ ಬಂದ ನಂತರ ತಕ್ಷಣವೇ ಕ್ರಮ ಕೈಗೊಳ್ಳಲಾಗುವುದು

858(1037) ಶ್ರೀ ಶ್ರೀನಿವಾಸಗೌಡ ಕೆ (ಕೋಲಾರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಇಟ್ಟಿಗೆ ಕಾರ್ಖಾನೆಗಳಿಗೆ ಸಬ್ಸಿಡಿ ಕೊಡುವ ಪದ್ಧತಿ ಜಾರಿಯಲ್ಲಿದೆಯೇ?

ಆ) ಹಾಗಿದ್ದಲ್ಲಿ 3 ವರ್ಷಗಳಿಂದ ಎಷ್ಟೆಷ್ಟು ಸಬ್ಸಿಡಿ ನೀಡಲಾಗಿದೆ? (ವಿವರ ನೀಡುವುದು)

ಶ್ರೀ ಶಿವಾನಂದ್ ಎನ್ ನಾಯ್ಕ್ (ಸಣ್ಣ ಕೈಗಾರಿಕಾ ಸಚಿವರು)

ಅ) ಪ್ರಸ್ತುತ ಜಾರಿಯಲ್ಲಿರುವ ಹೊಸ ಕೈಗಾರಿಕಾ ನೀತಿ 2006–2011ರಂತೆ ಇಟ್ಟಿಗೆ ಕಾರ್ಖಾನೆಗಳಿಗೆ (ಹಣಕಾಸು ಸಂಸ್ಥೆಯಿಂದ ಸಾಲ ಪಡೆದ ಸಿಮೆಂಟ್ ಹಾಲೋ ಬ್ಲಾಕ್ಸ್, ವೈರ್‌ಕಟ್ ಮತ್ತು ಫ್ಲೈ ಆಶ್ ಇಟ್ಟಿಗೆ ಘಟಕಗಳನ್ನು ಹೊರತು ಪಡಿಸಿ) ಯಾವುದೇ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡುವ ಅವಕಾಶ ಇರುವುದಿಲ್ಲ

ಆ) 2001–2006 ಹಾಗೂ ಹಿಂದಿನ ಅವಧಿಯ ಕೈಗಾರಿಕಾ ನೀತಿಯಡಿಯಲ್ಲಿ ಇಟ್ಟಿಗೆ ಕಾರ್ಖಾನೆಗಳಿಗೆ ಸಹಾಯಧನ ಒಟ್ಟು 975 ಇಟ್ಟಿಗೆ ಕಾರ್ಖಾನೆಗಳಿಗೆ ಮಂಜೂರಾಗಿರುವ ಸಹಾಯಧನ ಒಟ್ಟು ರೂ 30 41 ಕೋಟಿ ಬಿಡುಗಡೆ ಮಾಡಲು ಬಾಕಿ ಇರುತ್ತದೆ

ದಿನಾಂಕ 5 2 2004 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಇಟ್ಟಿಗೆ ಘಟಕಗಳಿಗೆ ಮಂಜೂರಾದ ಸಹಾಯಧನವನ್ನು ಬಿಡುಗಡೆ ಮಾಡಲು ಅನುಮೋದನೆ ನೀಡದೆ ಇರುವ ಕಾರಣ ರಾಜ್ಯದಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಯಾವುದೇ ಇಟ್ಟಿಗೆ ಕಾರ್ಖಾನೆಗಳಿಗೆ ಸಹಾಯಧನ ಬಿಡುಗಡೆ ಆಗಿರುವುದಿಲ್ಲ